

بسم اللہِ الرّحمٰن الرّحیم

# ಪ್ರವಾದಿ ಚರಿತ್ರೆ – ಹುನೈನ್ ಯುದ್ಧದ ಹಿನ್ನೆಲೆ

(ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಯು.ಕೆ.ಯ ಇಸ್ಲಾಮಾಬಾದ್‌ನ **'ಮಸ್ಜಿದ್ ಮುಬಾರಕ್'** ನಿಂದ **22-08-2025** ರಂದು ನೀಡಿದ **ಜುಮುಅ ಖುತ್‌ಬದ ಸಾರಾಂಶ**)

أَشْهَدُ أَنْ لَّا إِلٰهَ إِلَّا اللّٰهُ وَحْدَهُ لَا شَرِيْكَ لَهُ وَأَشْهَدُ أَنَّ مُحَمَّدًا عَبْدُهُ وَرَسُوْلُهُ۔

أَمَّا بَعْدُ فَأَعُوْذُ بِاللّٰهِ مِنَ الشَّيْطٰنِ الرَّجِيْمِ۔ بِسْمِ اللّٰهِ الرَّحْمٰنِ الرَّحِيْمِ۔

اَلْحَمْدُ لِلّٰهِ رَبِّ الْعَالَمِيْنَ۔ اَلرَّحْمٰنِ الرَّحِيْمِ۔ مٰلِكِ يَوْمِ الدِّيْنِ۔ إِيَّاكَ نَعْبُدُ وَإِيَّاكَ نَسْتَعِيْنُ۔

اِهْدِنَا الصِّرَاطَ الْمُسْتَقِيْمَ۔ صِرَاطَ الَّذِيْنَ أَنْعَمْتَ عَلَيْهِمْ غَيْرِ الْمَغْضُوْبِ عَلَيْهِمْ وَلَا الضَّآلِّيْنَ۔

*(ತಶಹ್ಹುದ್, ತಅವ್ವುಧ್, ಸೂರತುಲ್ ಫಾತಿಹ ಪಠಿಸಿದ ನಂತರ ಹಝ್ರತ್ ಖಲೀಫತುಲ್ ಮಸೀಹ್ ಖಾಮಿಸ್ ಅಯ್ಯದಹುಲ್ಲಾಹು ತಆಲಾ ಬಿನಸ್‌ರಿಹಿಲ್ ಅಝೀಝ್, ಹೀಗೆ ಹೇಳಿದರು:)*

ಹಝ್ರತ್ ಪೈಗಂಬರ್[ಸ]ರ ಜೀವನಚರಿತ್ರೆಗೆ ಸಂಬಂಧಪಟ್ಟು ಯುದ್ಧಗಳ ಕುರಿತು ಪ್ರಸ್ತಾಪಿಸಲಾಗುತ್ತಿತ್ತು. ಇದೇ ಹಿನ್ನೆಲೆಯಲ್ಲಿ, ಇಂದು ಹುನೈನ್ ಯುದ್ಧದ ಬಗ್ಗೆ ಸ್ವಲ್ಪ ವಿವರಣೆ ನೀಡುತ್ತೇನೆ. ಈ ಯುದ್ಧ 8 ಹಿಜರಿ ಶವ್ವಾಲ್ ತಿಂಗಳಲ್ಲಿ, ಹುನೈನ್ ಎಂಬ ಸ್ಥಳದಲ್ಲಿ ನಡೆಯಿತು. ಹುನೈನ್, ಮಕ್ಕಾದಿಂದ ಸುಮಾರು 26 ಕಿಲೋಮೀಟರ್ ದೂರದಲ್ಲಿ, ಮಕ್ಕಾ ಮತ್ತು ತಾಯಿಫ್ ನಡುವೆ ಇರುವ ಒಂದು ಊರಾಗಿದೆ. ಈ ಯುದ್ಧದಲ್ಲಿ ಭಾಗವಹಿಸಿದ್ದ ದೊಡ್ಡ ಗೋತ್ರ ಹವಾಝಿನ್ ಆಗಿದ್ದರಿಂದ, ಇದನ್ನು ಹವಾಝಿನ್ ಯುದ್ಧವೆಂದೂ ಕರೆಯಲಾಗುತ್ತದೆ. ಕೆಲವು ಚರಿತ್ರೆಗಾರರು ಇದನ್ನು ಔತಾಸ್ ಯುದ್ಧವೆಂದೂ ಕರೆದಿದ್ದಾರೆ, ಏಕೆಂದರೆ ಶತ್ರು ಸೈನ್ಯದ ಒಂದು ಭಾಗ ಹುನೈನ್‌ನಿಂದ ಪರಾರಿಯಾಗಿ ಔತಾಸ್ ಎಂಬ ಕಣಿವೆಗೆ ಹೋದಾಗ, ಮುಸ್ಲಿಮರು ಅಲ್ಲಿಗೆ ತಲುಪಿ ಶತ್ರುಗಳನ್ನು ಸೋಲಿಸಿದರು. ಆದರೆ, ಅನೇಕ ಲೇಖಕರು ಔತಾಸ್ ಯುದ್ಧದ ಕುರಿತು ಪ್ರತ್ಯೇಕವಾಗಿ ಉಲ್ಲೇಖಿಸಿದ್ದಾರೆ.

ಹುನೈನ್ ಯುದ್ಧದ ಪ್ರಸ್ತಾಪ ಪವಿತ್ರ ಖುರ್‌ಆನಿನಲ್ಲಿ ಈ ರೀತಿಯಲ್ಲಿದೆ: "ನಿಶ್ಚಯವಾಗಿಯೂ ಅಲ್ಲಾಹನು ನಿಮಗೆ ಹಲವು ಯುದ್ಧರಂಗಗಳಲ್ಲಿ ನೆರವಾಗಿದ್ದಾನೆ – ಮುಖ್ಯವಾಗಿ ಹುನೈನ್ ಯುದ್ಧ ದಿನದಂದು. ಆಗ ನೀವು ಅಧಿಕ ಸಂಖ್ಯೆಯಲ್ಲಿದ್ದುದು ನಿಮ್ಮನ್ನು ಅಹಂಭಾವಿಗಳನ್ನಾಗಿ ಮಾಡಿತ್ತು. ಆದರೆ ಅದು (ನಿಮ್ಮ ಆಧಿಕ್ಯ) ನಿಮಗೆ ಪ್ರಯೋಜನವನ್ನೇನೂ ಮಾಡಲಿಲ್ಲ. ಭೂಮಿ ವಿಶಾಲವಾಗಿದ್ದು ಕೂಡ ಅದು ನಿಮಗೆ ಸಂಕುಚಿತಗೊಳಿಸಲ್ಪಟ್ಟಿತು. ನೀವು ಹಿಮ್ಮೆಟ್ಟಿ ಬೆನ್ನು ತೋರಿಸಿದಿರಿ. ಅನಂತರ ಅಲ್ಲಾಹನು ತನ್ನ ಸಂದೇಶವಾಹಕನಿಗೂ ಸತ್ಯವಿಶ್ವಾಸಿಗಳಿಗೂ ತನ್ನ ಕಡೆಯಿಂದ ಮನಶ್ಶಾಂತಿಯನ್ನು ದಯಪಾಲಿಸಿದನು. ನಿಮಗೆ ಕಾಣಲು ಅಸಾಧ್ಯವಾದ ಕೆಲವು ಸೈನ್ಯಗಳನ್ನೂ ಅವನು ಇಳಿಸಿದನು. ಹಾಗೆ ಅವಿಶ್ವಾಸಿಗಳನ್ನು ಅವನು ಶಿಕ್ಷಿಸಿದನು. ಅವಿಶ್ವಾಸಿಗಳಿಗಿರುವ ಪ್ರತಿಫಲ ಅದೇ ಆಗಿದೆ. ಆ ಬಳಿಕ ಅಲ್ಲಾಹನು, ತಾನಿಚ್ಛಿಸುವವರ ಕಡೆಗೆ ಮತ್ತೂ ಕರುಣೆಯಿಂದ ತಿರುಗುತ್ತಾನೆ. ಅಲ್ಲಾಹನು ಅತ್ಯಂತ ಕ್ಷಮಾಶೀಲನೂ ಕಾರುಣ್ಯನಿಧಿಯೂ ಆಗಿದ್ದಾನೆ."

ಇದಕ್ಕೆ ಕಾರಣ ಏನೆಂದರೆ, ಮಕ್ಕಾ ವಿಜಯದ ಸಮಯದಲ್ಲಿ ಅರೇಬಿಯದ ದೊಡ್ಡ ದೊಡ್ಡ ಗೋತ್ರಗಳು ಇಸ್ಲಾಮ್ ಧರ್ಮವನ್ನು ಸ್ವೀಕರಿಸಿದ್ದುವು ಅಥವಾ ಹಝ್ರತ್ ಪೈಗಂಬರ್[ಸ]ರಿಗೆ ವಿಧೇಯರಾಗಿದ್ದುವು. ಆದರೆ, ಮಕ್ಕಾಕ್ಕೆ ಸಮೀಪದಲ್ಲಿ ವಾಸಿಸುತ್ತಿದ್ದ ಬನೂ ಹವಾಝಿನ್ ಮತ್ತು ಬನೂ ಸಖೀಫ್ ಗೋತ್ರಗಳು ಅತ್ಯಂತ ದಂಗೆಕೋರ ಮತ್ತು ಯುದ್ಧಪ್ರಿಯ ಗೋತ್ರಗಳಾಗಿದ್ದವು. ಅವರು ಆಜ್ಞೆಯನ್ನು ಸ್ವೀಕರಿಸಲು ನಿರಾಕರಿಸಿದ್ದಲ್ಲದೆ, ಅವರ ನಾಯಕರು ಒಟ್ಟು ಸೇರಿ ಹೀಗೆ ಹೇಳಿದರು: 'ಮುಹಮ್ಮದ್[ಸ] ಮಕ್ಕಾ ಸೇರಿದಂತೆ ಅರೇಬಿಯದ ಕೆಲವು ಗೋತ್ರಗಳನ್ನು ತಮ್ಮ ಅಧೀನಕ್ಕೆ ತಂದಿದ್ದಾರೆ. ಈಗ ಅವರು ಖಂಡಿತವಾಗಿಯೂ ನಮ್ಮ ಕಡೆಗೆ ಬರುವರು. ಆದ್ದರಿಂದ, ಅವರು ನಮ್ಮ ಮೇಲೆ ದಾಳಿ ಮಾಡುವುದಕ್ಕೆ ಮುಂಚಿತವಾಗಿ ನಾವು ಅವರ ಮೇಲೆ ದಾಳಿ ಮಾಡುವುದು ಉತ್ತಮ. ಮುಹಮ್ಮದ್[ಸ] ಇದುವರೆಗೂ ಅನನುಭವಿ ಜನರನ್ನು ಮಾತ್ರ ಎದುರಿಸಿದ್ದಾರೆ. ನಮ್ಮೊಂದಿಗೆ ಇಲ್ಲಿಯ ವರೆಗೂ ಮುಖಾಮುಖಿಯಾಗಿಲ್ಲ.'

ಬನೂ ಹವಾಝಿನ್ ಗೋತ್ರದೊಂದಿಗೆ ಸಕೀಫ್, ನಸರ್ ಮತ್ತು ಜಶ್‌ಮ್ ಗೋತ್ರಗಳ ಎಲ್ಲ ಯೋಧರು ಸಹ ಒಟ್ಟುಸೇರಿದರು. ಸಅದ್ ಬಿನ್ ಬಕರ್ ಮತ್ತು ಬನೂ ಹಿಲಾಲ್ ಗೋತ್ರಗಳ ಕೆಲವು ಜನರು ಕೂಡ ಸೇರಿದರು. ಕೆಲವು ವರದಿಗಳ ಪ್ರಕಾರ, ಬನೂ ಹವಾಝಿನ್ ವಾಸ್ತವವಾಗಿ ಬಹಳ ಹಿಂದೆಯೇ ಮುಸ್ಲಿಮರೊಂದಿಗೆ ಹೋರಾಡಲು ತಯಾರಿ ಆರಂಭಿಸಿತ್ತು, ಏಕೆಂದರೆ ಹಝ್ರತ್ ಪೈಗಂಬರ್[ಸ] ಯಹೂದಿಗಳು ಸೇರಿದಂತೆ ಇತರ ಗೋತ್ರಗಳನ್ನು ಒಂದೊಂದಾಗಿ ತಮ್ಮ ಅಧೀನಕ್ಕೆ ತರುತ್ತಿರುವುದನ್ನು ಅವರು ಗಮನಿಸಿದ್ದರು. ಇದರಿಂದ ಅವರಿಗೆ, ವಿಗ್ರಹಾರಾಧನೆಯು ಕೊನೆಗೊಂಡು ಹಝ್ರತ್ ಪೈಗಂಬರ್[ಸ] ಮತ್ತು ಅವರ ಸಹಾಬಿಯರು ಎಲ್ಲರ ಮೇಲೆ ಪ್ರಾಬಲ್ಯ ಸಾಧಿಸಬಹುದೆಂಬ ಆತಂಕ ಶುರುವಾಯಿತು. ಹಾಗಾಗಿ, ಅವರ ಮಾರ್ಗವನ್ನು ತಡೆಯುವುದು ಅಗತ್ಯವೆಂದು ಅವರು ನಿರ್ಧರಿಸಿದರು. ಇದಕ್ಕಾಗಿ, ಅವರು ತಯಾರಿ ಆರಂಭಿಸಿ, ಆಯುಧಗಳು ಮತ್ತು ಯುದ್ಧೋಪಕರಣಗಳನ್ನು ತರಲು ಉರ್ವ ಬಿನ್ ಮಸ್‌ಊದ್‌ರ ನಾಯಕತ್ವದಲ್ಲಿ ಒಂದು ಸಂಘವನ್ನು ಜುರಶ್ (ಜೋರ್ಡಾನ್) ನಗರಕ್ಕೆ ಕಳುಹಿಸಿದರು.

ಬನೂ ಹವಾಝಿನ್‌ನ ಈ ಸಿದ್ಧತೆಗಳ ಬಗ್ಗೆ ಹಝ್ರತ್ ಪೈಗಂಬರ್[ಸ]ರಿಗೆ ಈ ರೀತಿ ತಿಳಿಯಿತು: ಮಕ್ಕಾ ವಶಪಡಿಸಿಕೊಳ್ಳಲು ಮದೀನಾದಿಂದ ಹೊರಡುವಾಗ, ಹಝ್ರತ್ ಪೈಗಂಬರ್[ಸ] ಮುಂಚೂಣಿ ದಳವನ್ನು ಸೈನ್ಯದ ಮುಂದೆ ಕಳುಹಿಸಿದ್ದರು. ಈ ತಂಡವು ಬನೂ ಹವಾಝಿನ್ ಗೋತ್ರದ ಒಬ್ಬ ವ್ಯಕ್ತಿಯನ್ನು ಬಂಧಿಸಿತು. ಅವನು ಹವಾಝಿನ್ ಕಡೆಯಿಂದ ಮುಸ್ಲಿಮರ ಮೇಲೆ ಕಣ್ಣಿಡಲು ಅಡ್ಡಾಡುತ್ತಿದ್ದ ಒಬ್ಬ ಗೂಢಚಾರನಾಗಿದ್ದನು. ಹಝ್ರತ್ ಪೈಗಂಬರ್[ಸ] ಅವನನ್ನು ತೀವ್ರವಾಗಿ ವಿಚಾರಿಸಿದಾಗ, ಅವನು, ಬನೂ ಹವಾಝಿನ್ ಗೋತ್ರವು ದೊಡ್ಡ

ಸೈನ್ಯವನ್ನು ಒಟ್ಟುಗೂಡಿಸಿದೆ ಮತ್ತು ಬನೂ ಸಕೀಫ್ ಗೋತ್ರವನ್ನು ಕೂಡ ತಮ್ಮೊಂದಿಗೆ ಸೇರಿಸಿಕೊಂಡಿದೆ ಮತ್ತು ಭಾರೀ ಆಯುಧಗಳಿಗಾಗಿ ಜುರಶ್‌ಗೆ ನಿಯೋಗವನ್ನು ಕಳುಹಿಸಿದೆ ಎಂದು ತಿಳಿಸಿದನು.

ಬನೂ ಹವಾಝಿನ್ ಈ ಸಿದ್ಧತೆಗಳಲ್ಲಿ ನಿರತವಾಗಿರುವಾಗ, ಮಕ್ಕಾ ಯಾವುದೇ ವಿಶೇಷ ಪ್ರತಿರೋಧವಿಲ್ಲದೆ ಸುಲಭವಾಗಿ ವಶವಾಯಿತು. ಇದರಿಂದ ಹವಾಝಿನ್ ಗೋತ್ರದವರು ತಮ್ಮ ಶಕ್ತಿಯ ಹೆಮ್ಮೆಯಲ್ಲಿ, ಸ್ವತಃ ಮುಹಮ್ಮದ್(ಸ) ಮತ್ತು ಅವರ ಸಹಾಬಿಯರನ್ನು ಎದುರಿಸಲಿಕ್ಕಾಗಿ ಹೊರಡಲು ನಿರ್ಧರಿಸಿದರು. ಮುಸ್ಲಿಮರನ್ನು ಸೋಲಿಸಿ ಅವರನ್ನು ಸಂಪೂರ್ಣವಾಗಿ ನಿರ್ಮೂಲನ ಮಾಡುವುದು ತಮಗೆ ಮಾತ್ರ ಸಾಧ್ಯವೆಂದು ಅವರು ಭಾವಿಸಿದ್ದರು. ಆ ಎಲ್ಲ ಗೋತ್ರಗಳು ಹವಾಝಿನ್ ಗೋತ್ರದ ನಾಯಕ, ಮೂವತ್ತು ವರ್ಷದ ಯುವಕ ಮಾಲಿಕ್ ಬಿನ್ ಔಫ್‌ರನ್ನು ತಮ್ಮ ಸೇನಾಧಿಪತಿಯನ್ನಾಗಿ ಆರಿಸಿಕೊಂಡರು ಮತ್ತು 20,000 ಜನರ ಸೈನ್ಯವು ಹುನೈನ್ ಕಡೆಗೆ ಸಾಗಿತು.

ಬನೂ ಹವಾಝಿನಿನ ನಾಯಕ ಮಾಲಿಕ್ ಬಿನ್ ಔಫ್ ಈ ಯುದ್ಧದ ಸಿದ್ಧತೆಗಾಗಿ ಅರಬ್ ಇತಿಹಾಸದಲ್ಲಿ ಬಹುಶಃ ಯಾರೂ ಮಾಡಿರದಂತಹ ಒಂದು ಹೆಜ್ಜೆಯನ್ನಿಟ್ಟನು. ಪ್ರತಿಯೊಂದು ಗೋತ್ರದ ಪ್ರತಿಯೊಬ್ಬ ವ್ಯಕ್ತಿಯೊಡನೆ, ಯುದ್ಧಕ್ಕೆ ತಮ್ಮ ಮನೆಯಿಂದ ಒಬ್ಬಂಟಿಯಾಗಿ ಹೊರಡದೆ, ತಮ್ಮ ಹೆಂಡತಿ, ಮಕ್ಕಳು ಮತ್ತು ತಮ್ಮ ಸಂಪತ್ತು, ಜಾನುವಾರು ಎಲ್ಲವನ್ನೂ ಜೊತೆಗೆ ತರುವಂತೆ ಸೇನಾಧಿಪತಿಯು ಆದೇಶಿಸಿದನು. ಇದರ ಹಿಂದಿನ ಅವನ ಉದ್ದೇಶ ಏನೆಂದರೆ, ಅವನ ಸೈನ್ಯದ ಪ್ರತಿಯೊಬ್ಬ ಸೈನಿಕನೂ ತನ್ನ ಪ್ರಾಣವನ್ನು ಪಣಕ್ಕಿಟ್ಟು ಅಪ್ರತಿಮ ಶೌರ್ಯದಿಂದ ಹೋರಾಡಬೇಕು ಎಂದಾಗಿತ್ತು.

ಈ ಯುದ್ಧದಲ್ಲಿ, ಬನೂ ಜಶ್ಮ್ ಗೋತ್ರದ ನೂರು ವರ್ಷಕ್ಕಿಂತ ಹೆಚ್ಚು ವಯಸ್ಸಿನ ಓರ್ವ ವೃದ್ಧ ನಾಯಕ ದುರೈದ್ ಬಿನ್ ಸಿಮ್ಮ ಸೈನ್ಯವನ್ನು ಯುದ್ಧ ಮಾಡುವುದರಿಂದ ತಡೆಯಲು ಪ್ರಯತ್ನಿಸಿದ ಬಗ್ಗೆಯೂ ಉಲ್ಲೇಖವಿದೆ. ಮಾಲಿಕ್ ಬಿನ್ ಔಫ್ ಜೊತೆಗೆ ಜನರು ತಮ್ಮ ಎಲ್ಲ ಸಂಪತ್ತು, ತಮ್ಮ ಸ್ತ್ರೀಯರು, ತಮ್ಮ ಮಕ್ಕಳನ್ನು ಕರೆದುಕೊಂಡು ಔತಾಸ್ ಕಣಿವೆಗೆ ತಲುಪಿ ಅಲ್ಲಿ ಬೀಡುಬಿಟ್ಟಾಗ, ವೃದ್ಧ ದುರೈದ್ ಬಿನ್ ಸಿಮ್ಮ ಮಾಲಿಕ್ ಬಿನ್ ಔಫ್‌ನ ಯುದ್ಧ ತಂತ್ರಕ್ಕೆ ವಿರೋಧ ವ್ಯಕ್ತಪಡಿಸಿ ಹೀಗೆ ಹೇಳಿದನು: 'ನಿಮಗೆ ಯುದ್ಧ ಮಾಡುವುದು ಗೊತ್ತಿಲ್ಲ, ಎಲೈ ಹವಾಝಿನ್ ಸಮುದಾಯವೇ ದೇವನಾಣೆ! ಈ ಅಭಿಪ್ರಾಯ ಸರಿಯಲ್ಲ. ಈ ವ್ಯಕ್ತಿ ನಿಮ್ಮ ಸ್ತ್ರೀಯರನ್ನು ಅಪಮಾನಗೊಳಿಸುವನು ಮತ್ತು ನಿಮ್ಮನ್ನು ಶತ್ರುಗಳಿಗೆ ಒಪ್ಪಿಸಿ ಸ್ವತಃ ಸಕೀಫ್‌ನ ಕೋಟೆಗಳಲ್ಲಿ ಅಡಗಿ ಕೂರುವನು. ಆದ್ದರಿಂದ, ನೀವು ಹಿಂತಿರುಗಿ ಬನ್ನಿ ಮತ್ತು ಇವನನ್ನು ಬಿಟ್ಟುಬಿಡಿ.' ಹೀಗೆ ಅವನು ಯುದ್ಧ ಮಾಡದಿರಲು ಸಲಹೆ ನೀಡಿದನು. ಇದಕ್ಕೆ ಮಾಲಿಕ್ ತನ್ನ ಖಡ್ಗವನ್ನು ಹೊರತೆಗೆದು ಹೀಗೆ ಹೇಳಿದನು: ಎಲೈ ಹವಾಝಿನ್ ಸಮುದಾಯವೇ, ದೇವನಾಣೆ! ನೀವು ನನ್ನ ಆದೇಶವನ್ನು ಪಾಲಿಸಲೇಬೇಕು. ಇಲ್ಲದಿದ್ದರೆ, ನಾನು ನನ್ನ ಎಲ್ಲ ಭಾರವನ್ನು ಈ ಖಡ್ಗದ ಮೇಲೆ ಹಾಕಿ ಇದನ್ನು ನನ್ನ ಎದೆಗೆ ಇಳಿಸಿಕೊಳ್ಳುವೆನು.' (ಅಂದರೆ ಆತ್ಮಹತ್ಯೆ ಮಾಡಿಕೊಳ್ಳುವೆನು). ಬನೂ ಹವಾಝಿನ್ ಜನರು ಪರಸ್ಪರ ಸಮಾಲೋಚಿಸಿ ಹೀಗೆ ಹೇಳಿದರು: 'ದೇವನಾಣೆ! ನಾವು ಮಾಲಿಕ್‌ನ ಆಜ್ಞೆಯನ್ನು ಉಲ್ಲಂಘಿಸಿದರೆ, ಅವನು ತನ್ನ ಪ್ರಾಣವನ್ನು ಕಳೆದುಕೊಳ್ಳುವನು, ಅವನಾದರೋ ಒಬ್ಬ ಯುವಕ. ಆಗ ನಾವು ದುರೈದ್‌ನೊಂದಿಗೆ ಉಳಿಯಬೇಕಾಗುತ್ತದೆ, ಅವನಾದರೋ ಒಬ್ಬ ಮುದುಕ. ಅವನೊಂದಿಗೆ ಸೇರಿ ಯುದ್ಧ ಮಾಡಲು ಸಾಧ್ಯವಲ್ಲ.' ಹಾಗೆ ಮಾಲಿಕ್‌ನ ಮಾತನ್ನು ಒಪ್ಪಿಕೊಳ್ಳಲಾಯಿತು. 'ಇದರ ಹೊರತಾಗಿ ಬೇರೆ ಯಾವುದಾದರೂ ಅಭಿಪ್ರಾಯವಿದೆಯೇ?' ಎಂದು ಮಾಲಿಕ್ ದುರೈದ್‌ನೊಡನೆ ಕೇಳಿದನು. ಆಗ ದುರೈದ್ ನೀಡಿದ ಸಲಹೆಯನ್ನು ಮಾಲಿಕ್ ಒಪ್ಪಿಕೊಂಡು ತನ್ನ ಸಹಚರರೊಡನೆ ಹೀಗೆ ಹೇಳಿದನು: 'ನೀವು ಘಟ್ಟಗಳಲ್ಲಿ ಮತ್ತು ಕಣಿವೆಗಳ ತಪ್ಪಲಿನಲ್ಲಿ ಅಡಗಿಕೊಳ್ಳಬೇಕು ಮತ್ತು ಇಸ್ಲಾಮಿನ ಸೈನ್ಯವನ್ನು ಸೋಲಿಸಲಿಕ್ಕಾಗಿ ಮೊದಲ ದಾಳಿಯನ್ನೇ ಏಕಾಏಕಿ ಮಾಡಬೇಕು.'

ಹಝ್ರತ್ ಪೈಗಂಬರ್(ಸ)ರಿಗೆ ಬನೂ ಹವಾಝಿನ್ ಗೋತ್ರದ ಸಿದ್ಧತೆಗಳ ಬಗ್ಗೆ ಸುದ್ದಿ ತಲುಪಿದಾಗ, ಅವರು ಹವಾಝಿನ್ ಗೋತ್ರದ ಸೈನ್ಯದ ಸ್ಥಿತಿಗತಿಗಳನ್ನು ಅರಿಯಲು ಹಝ್ರತ್ ಅಬ್ದುಲ್ಲಾ ಬಿನ್ ಅಬೂ ಹದ್‌ರದ್(ರ)ರನ್ನು ಕಳುಹಿಸಿದರು. ಅವರು ಹವಾಝಿನ್ ಗೋತ್ರದ ಜನರ ಸೈನ್ಯಕ್ಕೆ ಪ್ರವೇಶಿಸಿ, ಅವರ ಮಧ್ಯೆ ಓಡಾಡಿ ಎಲ್ಲ ರೀತಿಯ ಮಾಹಿತಿಗಳನ್ನು ಸಂಗ್ರಹಿಸಿದರು. ಅವರು ಒಂದು ಅಥವಾ ಎರಡು ದಿನ ಅವರೊಂದಿಗೆ ಉಳಿದು, ಅನಂತರ ಹಝ್ರತ್ ಪೈಗಂಬರ್(ಸ)ರ ಬಳಿಗೆ ಬಂದು ಎಲ್ಲ ಸುದ್ದಿಯನ್ನು ನೀಡಿದರು. ಆಗ ಹಝ್ರತ್ ಪೈಗಂಬರ್(ಸ) ಅನಿವಾರ್ಯವಾಗಿ ಯುದ್ಧದ ಸಿದ್ಧತೆಗಳನ್ನು ಆರಂಭಿಸಿದರು.

ಹಝ್ರತ್ ಪೈಗಂಬರ್(ಸ) ಬನೂ ಹವಾಝಿನ್ ಗೋತ್ರದೊಂದಿಗೆ ಹೋರಾಡಲು ಮಕ್ಕಾದಿಂದ ಹೊರಡುವುದಕ್ಕೆ ಮೊದಲು ಸೈನ್ಯವನ್ನು ಪರಿಶೀಲಿಸಿದಾಗ, ಯುದ್ಧಕ್ಕೆ ಅಗತ್ಯವಾದ ಆಯುಧಗಳು ಇಸ್ಲಾಮಿನ ಸೈನ್ಯದಲ್ಲಿ ಬಹಳ ಕಡಿಮೆ ಇರುವುದಾಗಿ ಕಂಡರು. ಈ ಕೊರತೆಯನ್ನು ನೀಗಿಸಲು, ಅಂದಿನ ವರೆಗೂ ಮುಶ್ರಿಕರಾಗಿದ್ದ ಮಕ್ಕಾದ ಶ್ರೀಮಂತ ನಾಯಕ ಸಫ್ವಾನ್ ಬಿನ್ ಉಮಯ್ಯರಿಂದ ಹಝ್ರತ್ ಪೈಗಂಬರ್(ಸ) ಕೆಲವು ಆಯುಧಗಳನ್ನು ಸಾಲವಾಗಿ ಕೇಳಿದರು. ಅದೇ ರೀತಿ, ತಮ್ಮ ಚಿಕ್ಕಪ್ಪನ ಮಗ ನೌಫಲ್ ಬಿನ್ ಹಾರಿಸ್‌ರಿಂದಲೂ ಮೂರು ಸಾವಿರ ಈಟಿಗಳನ್ನು ಎರವಲು ಪಡೆದರು ಹಾಗೂ 'ನಾನು ನಿನ್ನ ಈ ಈಟಿಗಳನ್ನು ಶತ್ರುವಿನ ಬೆನ್ನಿಗೆ ಇರಿಯುವುದನ್ನು ನೋಡುತ್ತಿದ್ದೇನೆ' ಎಂದು ಹೇಳಿದರು. ಶತ್ರುಗಳು ಸೋತು ಪಲಾಯನಗೊಳ್ಳುವರು ಮತ್ತು ಭಾರಿ ಪ್ರಾಣಹಾನಿಯನ್ನು ಅನುಭವಿಸುವರು ಎಂಬ ಮುನ್ಸೂಚನೆ ಹಝ್ರತ್ ಪೈಗಂಬರ್(ಸ)ರ ಈ ಹೇಳಿಕೆಯಲ್ಲಿ ಇತ್ತು. ಅದೇ ರೀತಿ, ಇಬ್ನ್ ಅಬೂ ರಬೀಅರಿಂದಲೂ ಕೆಲವು ಆಯುಧಗಳನ್ನು ಎರವಲು ಪಡೆದರು.

ಹಝ್ರತ್ ಪೈಗಂಬರ್(ಸ)ರ ಉದಾತ್ತ ನೈತಿಕಗುಣದ ಒಂದು ಹೊಳಪು ಇಲ್ಲಿ ಕಾಣಬಹುದಾಗಿದೆ. ಅವರು ಮಕ್ಕಾದ ಮೇಲೆ ಜಯ ಗಳಿಸಿದ್ದರು. ಈಗ ಅದು ಒಂದು ಅಧೀನ ಪ್ರದೇಶವಾಗಿತ್ತು. ಯುದ್ಧದ ನಿಯಮಗಳು ಮತ್ತು ಸಂಪ್ರದಾಯಗಳ ಪ್ರಕಾರ, ಜಯಶಾಲಿಯಾದವನು ಅಧೀನ ಸಮುದಾಯದ ಸಂಪತ್ತಿನ ಮಾಲೀಕನಾಗುತ್ತಾನೆ. ಆದರೆ ಯುದ್ಧಕ್ಕೆ ಆಯುಧಗಳ ಅವಶ್ಯಕತೆ ಬಂದಾಗ, ಎಷ್ಟು ಆಯುಧಗಳನ್ನು ತೆಗೆದುಕೊಳ್ಳಲಾಗುವುದೋ ಅಷ್ಟನ್ನೇ ಹಿಂದಿರುಗಿಸುತ್ತೇವೆ ಎಂಬ ಭರವಸೆಯೊಂದಿಗೆ ಪ್ರತಿಯೊಂದು ಆಯುಧವನ್ನು ಸಾಲವಾಗಿ ತೆಗೆದುಕೊಳ್ಳಲಾಯಿತು. ಅದೇ ರೀತಿ, ಅಬೂ ಜಹಲ್‌ನ ಸಹೋದರ ಅಬ್ದುಲ್ಲಾಹ್ ಬಿನ್ ಅಬೂ ರಬೀಅರಿಂದ ಹಝ್ರತ್

ಪೈಗಂಬರ್[ಸ] ಮೂವತ್ತು, ನಲವತ್ತು ಸಾವಿರ ದಿರ್ಹಮ್ ಸಾಲ ಪಡೆದರು. ಇವರು ಮಕ್ಕಾ ವಿಜಯದ ದಿನ ಮುಸ್ಲಿಮರಾಗಿದ್ದರು ಎಂಬುವುದಾಗಿ ವರದಿಯಾಗಿದೆ.

(ವಿವರಣೆ ನೀಡುತ್ತಾ ಹುಝೂರ್ ಹೇಳಿದರು:) ಹಝ್ರತ್ ಪೈಗಂಬರ್[ಸ] ವಿವಿಧ ಅವಶ್ಯಕತೆಗಳಿಗಾಗಿ ಈ ಹಣವನ್ನು ಸಾಲವಾಗಿ ಪಡೆದಿರಬಹುದು, ಇದರಲ್ಲಿ ಆರ್ಥಿಕ ನೆರವು ಮತ್ತು ಪರಿಹಾರಧನದ ಪಾವತಿಯೂ ಸೇರಿರಬಹುದು. ಇದರ ಉಳಿದ ಭಾಗವನ್ನು ಮುಂದಿನ ಬಾರಿ ವಿವರಿಸಲಾಗುವುದು.

(ಖುತ್ಬದಲ್ಲಿ ಕೊನೆಯಲ್ಲಿ ಹುಝೂರ್ ಹೇಳಿದರು:) ಜುಮಾ ನಮಾಝ್ ನಂತರ ನಾನು ಎರಡು 'ಜನಾಝಾ ಗ್ಹಾಯಿಬ್ ನಮಾಝ್ ನೆರವೇರಿಸುತ್ತೇನೆ. ಮೊದಲನೆಯದ್ದು ಸಿಯಾಲ್‌ಕೋಟಿನ ಖ್ವಾಜ ಅಬ್ದುರ್ರಹ್ಮಾನ್ ಸಾಹಿಬ್‌ರ ಪುತ್ರರಾದ ಖ್ವಾಜ ಮುಖ್ತಾರ್ ಅಹ್ಮದ್ ಸಾಹಿಬ್ ಬಟ್‌ರದ್ದಾಗಿದೆ. ಅವರು ಕೇಂದ್ರ ಮಟ್ಟದಲ್ಲಿ ಫಝ್ಲುಲ್ ಉಮರ್ ಫೌಂಡೇಶನ್‌ನ ನಿರ್ದೇಶಕರಾಗಿ ಸೇವೆ ಸಲ್ಲಿಸಿದ್ದರು ಮತ್ತು ಹಲವು ವರ್ಷಗಳ ಕಾಲ ದಾರುಲ್ ಖಝಾ ರಬ್‌ವದಲ್ಲಿ ಖಾಝಿಯಾಗಿ ಸೇವೆ ಸಲ್ಲಿಸಿದ್ದರು. ಖಝಾದಲ್ಲಿ ಇವರೊಂದಿಗೆ ನಾನು ಸ್ವಲ್ಪ ಕಾಲ ಕೆಲಸ ಮಾಡಿದ್ದೇನೆ, ಅವರು ಬಹಳ ಬುದ್ಧಿವಂತ ಮತ್ತು ವಿನಮ್ರ ವ್ಯಕ್ತಿಯಾಗಿದ್ದರು. ಖಿಲಾಫತಿನೊಂದಿಗೆ ಅವರಿಗೆ ಸದಾ ಸಂಬಂಧವಿತ್ತು ಮತ್ತು ನಂತರ ನನ್ನೊಂದಿಗೂ ಆಪ್ತ ಸಂಬಂಧವನ್ನು ಹೊಂದಿದ್ದರು. 2002ರಲ್ಲಿ ಅವರು ಕೆನಡಾಕ್ಕೆ ವಲಸೆ ಹೋದರು, ಅಲ್ಲಿ ಪ್ರಾದೇಶಿಕ ಅಮೀರ್ ಆಗಿ ಸೇವೆ ಸಲ್ಲಿಸುತ್ತಿದ್ದರು.

ಎರಡನೆಯದ್ದು ಭಾರತದ ನಜೀರ್ ಅಹ್ಮದ್ ಸಾಹಿಬ್‌ರ ಪತ್ನಿಯಾದ ಸಯೀದಾ ಬೇಗಮ್ ಸಾಹಿಬರದ್ದಾಗಿದೆ. ಇವರೂ ಇತ್ತೀಚೆಗೆ 75ನೇ ವಯಸ್ಸಿನಲ್ಲಿ ನಿಧನರಾದರು. **ಇನ್ನಾ ಲಿಲ್ಲಾಹಿ ವ ಇನ್ನಾ ಇಲೈಹಿ ರಾಜಿಊನ್**. ಅಲ್ಲಾಹನ ಅನುಗ್ರಹದಿಂದ ಅವರು ವಸಿಯ್ಯತ್ ಮಾಡಿದ್ದರು. ಅವರು ಪತಿಯನ್ನಲ್ಲದೇ ಮೂವರು ಪುತ್ರಿಯರನ್ನು ಮತ್ತು ನಾಲ್ವರು ಪುತ್ರರನ್ನು ಅಗಲಿರುವರು. ಖಾದಿಯಾನಿನ ಇಸ್ಲಾಹೋ ಇರ್‌ಶಾದ್ ವಿಭಾಗದ ನಾಇಬ್ ನಾಝಿರ್ ಆಗಿರುವ ತಾಹೀರ್ ಅಹ್ಮದ್ ತಾರಿಕ್ ಸಾಹಿಬ್‌ರ ತಾಯಿಯಾಗಿದ್ದರು. ಇವರು ಜಮಾಅತಿನ ಪ್ರತಿನಿಧಿಯಾಗಿ ಇಲ್ಲಿ ಇಂಗ್ಲೆಂಡಿಗೆ ಬಂದಿದ್ದಾಗ ಅವರ ತಾಯಿಯ ನಿಧನವಾಯಿತು. ಆದ್ದರಿಂದ ಅವರಿಗೆ ತಾಯಿಯ ಜನಾಝದಲ್ಲಿ ಭಾಗವಹಿಸಲು ಸಾಧ್ಯವಾಗಲಿಲ್ಲ. ಅವರ ಕಿರಿಯ ಮಗ ಶಬೀರ್ ಅಹ್ಮದ್ ಸಾಹಿಬ್ ಕೂಡ ಜಮಾಅತಿನ ಮುಅಲ್ಲಿಮ್ ಆಗಿರುವರು. ಅದೇ ರೀತಿ, ಅವರ ಪುತ್ರಿ ಕೂಡ ಜಮಾಅತಿನ ಮುಬಲ್ಲಿಗ್ ಆಗಿರುವ ಜಬ್ಬಾರ್ ಸಾಹಿಬ್‌ರ ಪತ್ನಿಯಾಗಿದ್ದಾರೆ. ಉಳಿದ ಇಬ್ಬರು ಪುತ್ರರು ಕೂಡ ಜಮಾಅತಿನ ಸೇವೆ ಸಲ್ಲಿಸುವವರಾಗಿದ್ದಾರೆ. ಇವರದ್ದು ಬಹಳ ಸೇವಾಪರ ಕುಟುಂಬವಾಗಿದೆ. ಈ ಕುಟುಂಬದಲ್ಲಿ ಅಹ್ಮದಿಯ್ಯತ್ತಿನ ಪ್ರವೇಶವು ಹಝ್ರತ್ ಮಸೀಹ್ ಮೌಊದ್[ಅ]ರ ಸಹಾಬಿಯಾಗಿದ್ದ ಹಝ್ರತ್ ಖಾಝಿ ಮುಹಮ್ಮದ್ ಅಕ್ಬರ್ ಭಟ್ಟಿ ಸಾಹಿಬ್[ರ]ರ ಮೂಲಕ ಆಗಿತ್ತು. ಇವರು ಬಹಳ ಧರ್ಮನಿಷ್ಠೆ ಹಾಗೂ ನಮಾಝ್ ಮತ್ತು ಉಪವಾಸ ಅನುಷ್ಠಿಸುವವರಾಗಿದ್ದರು.

——————————*****——————————

اَلْحَمْدُ لِلّٰهِ نَحْمَدُهٗ وَنَسْتَعِيْنُهٗ وَنَسْتَغْفِرُهٗ وَنُؤْمِنُ بِهٖ وَنَتَوَكَّلُ عَلَيْهِ وَنَعُوْذُ بِاللّٰهِ
مِنْ شُرُوْرِ اَنْفُسِنَا وَمِنْ سَيِّئَاتِ اَعْمَالِنَا مَنْ يَّهْدِهِ اللّٰهُ فَلَا مُضِلَّ لَهٗ وَمَنْ يُّضْلِلْهُ
فَلَا هَادِىَ لَهٗ ۔ وَنَشْهَدُ اَنْ لَّآ اِلٰهَ اِلَّا اللّٰهُ وَنَشْهَدُ اَنَّ مُحَمَّدًا عَبْدُهٗ وَرَسُوْلُهٗ
عِبَادَ اللّٰهِ رَحِمَكُمُ اللّٰهُ اِنَّ اللّٰهَ يَأْمُرُ بِالْعَدْلِ وَالْاِحْسَانِ وَاِيْتَآءِ ذِى الْقُرْبٰى
وَيَنْهٰى عَنِ الْفَحْشَآءِ وَالْمُنْكَرِ وَالْبَغْيِ يَعِظُكُمْ لَعَلَّكُمْ تَذَكَّرُوْنَ ۝ اُذْكُرُوا اللّٰهَ
يَذْكُرْكُمْ وَادْعُوْهُ يَسْتَجِبْ لَكُمْ وَلَذِكْرُ اللّٰهِ اَكْبَرُ۔


***Friday Sermon delivered by Hadrath Khaleefatul Masih Al Khamis**(atba)*

At, ***'Masjid Mubarak',*** *Islamabad, Tilford,* U.K. On 22-08-2025

**Summarized by** *Majlis Ansarullah Bharat*

***Kannada Translation****:* Moulavi Inamullah for Kannada Desk, Qadian

***Reviewed by****:* M.P Ibrahim | ***Layout****:* Basheer K.P. Manjeshwar

***Published By****:* Kannada Isha'at Team for Nazarath Nashr-O-Isha'ath, Qadian

***Email****: khutuba.kannada@gmail.com*

**You can find all the Sermons archived at**: www.alislam.org/friday-sermon